# ಮಾನವ ಹಕ್ಕುಗಳ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿ

**ಉದಯಕಾಲ ನ್ಯೂಸ್, ಕೋಲಾರ:** ಭಾರತ ಸಂವಿಧಾನದ ಚೌಕಟ್ಟಿನಲ್ಲಿ ಮನುಷ್ಯನ ಹಕ್ಕುಗಳು ಉಲ್ಲಂಘನೆಯಾಗದಂತೆ ಸಂರಕ್ಷಿಸುವುದು ಪ್ರತಿಯೊಬ್ಬರ ಜವಾಬ್ದಾರಿ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಆರ್. ನಟೇಶ್ ತಿಳಿಸಿದರು.

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ, ಜಿಲ್ಲಾಡಳಿತ, ಜಿಪಂ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಕರ್ನಾಟಕ ಮಾನವ ಹಕ್ಕುಗಳ ಸಮಿತಿ ಇವರ ಆಶ್ರಯದಲ್ಲಿ ಬುಧವಾರ ನಗರದ ಟಿ.ಚನ್ನಯ್ಯ ರಂಗಮಂದಿರದಲ್ಲಿ ನಡೆದ ವಿಶ್ವ ಮಾನವ ಹಕ್ಕುಗಳ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮನುಷ್ಯ ಭ್ರೂಣಾವಸ್ಥೆಯಿಂದ ಹಿಡಿದು ಕೊನೆವರೆಗೆ ತನ್ನದೇ ಆದ ಹಕ್ಕುಗಳನ್ನು ಹೊಂದಿದ್ದಾನೆ. ಆ ಹಕ್ಕುಗಳನ್ನು ಕಸಿದುಕೊಳ್ಳುವುದು ಅಪರಾಧ. ಹೀಗಾಗಿ ಹಕ್ಕುಗಳ ರಕ್ಷಣೆಗೆ ಪ್ರತಿಯೊಬ್ಬರು ಕೈ ಜೋಡಿಸಬೇಕಾಗಿದೆ. ಮಾನವ ಹಕ್ಕುಗಳ ರಕ್ಷಣೆ ದೇಶದ ಸಂವಿಧಾನದ ಆದ್ಯ ಆಶಯವಾಗಿದೆ. ಈ ಹಕ್ಕುಗಳನ್ನು ರಕ್ಷಿಸಲು ದೇಶದಲ್ಲಿ ಮಾನವ ಹಕ್ಕುಗಳ ಆಯೋಗವನ್ನು ರಚಿಸಲಾಗಿದೆ ಎಂದರು.

ಬದುಕುವ ಹಕ್ಕು, ಶಿಕ್ಷಣ, ಸಾಂಸ್ಕೃತಿಕ, ಆರೋಗ್ಯ, ಸ್ತ್ರೀ ಸ್ವಾತಂತ್ರ್ಯ ಸೇರಿದಂತೆ ಮನುಷ್ಯನಿಗಿರುವ ಎಲ್ಲ ರೀತಿಯ ಮೂಲ ಹಕ್ಕುಗಳನ್ನು ಸಂರಕ್ಷಣೆ ಮಾಡುವ ನಿಟ್ಟಿನಲ್ಲಿ ನಾವೆಲ್ಲರೂ ಒಂದಾಗುವ ಅಗತ್ಯವಿದೆ. ಮಾನವ ಹಕ್ಕುಗಳು ನಮ್ಮ ದೈನಂದಿನ ಅಗತ್ಯತೆಗಾಗಿ ಈ ಬಾರಿಯ ಘೋಷವಾಕ್ಯವಾಗಿದೆ ಎಂದು ತಿಳಿಸಿದರು.

ಕಾನೂನಿನ ಅರಿವಿನ ಬಗ್ಗೆ ಸಾರ್ವಜನಿಕರು ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ಮತ್ತು ಉಚಿತ ಸಹಾಯವಾಣಿಯಿಂದ ಪಡೆಯಬಹುದು ಎಂದು ಹೇಳಿದರು.

ಅಪರ ಜಿಲ್ಲಾಧಿಕಾರಿ ಎಸ್.ಮಂಗಳ ಅವರು ವಿಶ್ವ ಮಾನವ ಹಕ್ಕುಗಳ ದಿನಾಚರಣೆ ಪ್ರಯುಕ್ತ ಪ್ರತಿಜ್ಞಾವಿಧಿ ಬೋಧಿಸಿದರು ಮತ್ತು ಸರ್ಕಾರಿ ಕಾನೂನು ಕಾಲೇಜು ಪ್ರಾಧ್ಯಾಪಕ ರಂಗನಾಥಯ್ಯ ಮಾನವ ಹಕ್ಕುಗಳ ಬಗ್ಗೆ ಉಪನ್ಯಾಸ ನಡೆಸಿದರು.

ಕೆಎಸ್ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಾಥ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ವಿಜಯಲಕ್ಷ್ಮಿ, ವಕೀಲರ ಸಂಘದ ಅಧ್ಯಕ್ಷ ಎಲ್. ಶ್ರೀನಿವಾಸ್, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಸಮಿತಿ ರಾಜ್ಯಾಧ್ಯಕ್ಷ ಕೆ.ಸಿ. ಸಂತೋಷ್, ಜಿಲ್ಲಾಧ್ಯಕ್ಷ ಟಮಕ ಶ್ರೀನಾಥ್ ಸೇರಿದಂತೆ ಮತ್ತಿತರರಿದ್ದರು.

**ಮಾನವ ಹಕ್ಕುಗಳು ಉಲ್ಲಂಘನೆಯಾದ ಸಂದರ್ಭದಲ್ಲಿ ಮಹಿಳೆಯರು, ಮಕ್ಕಳು, ಸಾರ್ವಜನಿಕರು, ವಿದ್ಯಾರ್ಥಿಗಳು ಮುಕ್ತವಾಗಿ ಪೊಲೀಸರ ಬಳಿ ಬಂದು ದೂರನ್ನು ನೀಡಬಹುದು. ನಾವು ಅವರ ಮೇಲೆ ಕಾನೂನು ಕ್ರಮಗಳನ್ನು ಕೈಗೊಳ್ಳುತ್ತೇವೆ. ಆದರೆ ಮಾನವ ಹಕ್ಕುಗಳನ್ನು ಸಾರ್ವಜನಿಕರು ಉಪಯೋಗಪಡಿಸಿಕೊಳ್ಳಬೇಕೆ ಹೊರತು ದುರುಪಯೋಗ ಪಡಿಸಿಕೊಳ್ಳಬಾರದು.**

-ಜಗದೀಶ್, ಅಪರ ಪೊಲೀಸ್ ವರಿಷ್ಠಾಧಿಕಾರಿ

# ಟಿಎಪಿಸಿಎಂಎಸ್ ಸಂಘ ಎನ್‌ಡಿಎ ತೆಕ್ಕೆಗೆ

**ಉದಯಕಾಲ ನ್ಯೂಸ್, ಗುಡಿಬಂಡೆ:** ತಾಲೂಕಿನ ಪ್ರತಿಷ್ಠಿತ ಸಹಕಾರ ಸಂಸ್ಥೆಯಾದ ವ್ಯವಸಾಯೋತ್ಪನ್ನ ಸೇವಾ ಸಹಕಾರ ಮಾರಾಟ ಮಂಡಳಿ (ಟಿಎಪಿಸಿಎಂಎಸ್) ಚುನಾವಣೆಯಲ್ಲಿ ಎನ್‌ಡಿಎ ಬೆಂಬಲಿತ ಅಭ್ಯರ್ಥಿಗಳು ಭರ್ಜರಿ ಜಯಗಳಿಸಿದ್ದು, ದಶಕಗಳಿಂದ ಅಬಾಧಿತವಾಗಿದ್ದ ಕಾಂಗ್ರೆಸ್ ಭದ್ರಕೋಟೆಯನ್ನು ಛಿದ್ರಗೊಳಿಸಿದ್ದಾರೆ.

ಮೂರು ವರ್ಷಗಳ ಆಡಳಿತ ಮಂಡಳಿಗೆ ನಡೆದ ಈ ಚುನಾವಣೆಯು ತೀವ್ರ ಕುತೂಹಲ ಕೆರಳಿಸಿತ್ತು. ಒಟ್ಟು 14 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಎನ್‌ಡಿಎ ಒಕ್ಕೂಟದ ಅಭ್ಯರ್ಥಿಗಳು ಎಲ್ಲ ಸ್ಥಾನಗಳಲ್ಲೂ ಸ್ಪರ್ಧಿಸಿದ್ದು, 10 ಸ್ಥಾನಗಳಲ್ಲಿ ಗೆಲುವು ಸಾಧಿಸುವ ಮೂಲಕ ಸಂಘದ ಆಡಳಿತ ಚುಕ್ಕಾಣಿ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ಈ ಫಲಿತಾಂಶವು ತಾಲೂಕು ರಾಜಕೀಯದಲ್ಲಿ ಮಹತ್ವದ ಬದಲಾವಣೆಗೆ ಸಾಕ್ಷಿಯಾಗಿದೆ.

ವಿಜೇತ ಅಭ್ಯರ್ಥಿಗಳು: ಸಾಮಾನ್ಯ ಕ್ಷೇತ್ರದಿಂದ ಕೆ.ಜೆ. ಅನಂದರೆಡ್ಡಿ, ಅದಿನಾರಾಯಾಣಪ್ಪ ಹಾಗೂ ಗಂಗರೆಡ್ಡಿ ಎನ್., ಪರಿಶಿಷ್ಟ ಜಾತಿ ಕ್ಷೇತ್ರದಿಂದ ನಾರಾಯಣಸ್ವಾಮಿ ಕೆ.ಎ., ಪರಿಶಿಷ್ಟ ಪಂಗಡ ಕ್ಷೇತ್ರದಿಂದ ನರಸಿಂಹಪ್ಪ, ಪ್ರವರ್ಗ-ಎ ಕ್ಷೇತ್ರದಿಂದ ಮನೋಜ್ ಕುಮಾರ್, ಪ್ರವರ್ಗ-ಬಿ ಕ್ಷೇತ್ರದಿಂದ ವೆಂಕಟರೆಡ್ಡಿ, ಮಹಿಳಾ ಮೀಸಲು ಕ್ಷೇತ್ರದಿಂದ ಭಾಗ್ಯಮ್ಮ ಹಾಗೂ ಸುಜಾತ, ಸಹಕಾರ ಸಂಘಗಳ ಪ್ರತಿನಿಧಿಗಳು- ವೇಣುಗೋಪಾಲ, ಮಹದೇವಪ್ಪ, ವೆಂಕಟನರಸಪ್ಪ, ಶಿವಣ್ಣ ಹಾಗೂ ಶ್ರೀರಾಮಪ್ಪ ಆಯ್ಕೆಯಾಗಿದ್ದಾರೆ.

ಚುನಾವಣಾ ಅಧಿಕಾರಿ ಪ್ರೇಮಕುಮಾರ್ ಫಲಿತಾಂಶ ಪ್ರಕಟಿಸಿದರು. ಈ ಗೆಲುವಿನೊಂದಿಗೆ ಎನ್‌ಡಿಎ ಪಾಳಯದಲ್ಲಿ ಸಂಭ್ರಮ ಮನೆಮಾಡಿದ್ದು, ನೂತನ ಆಡಳಿತ ಮಂಡಳಿ ರಚನೆಗೆ ಹಾದಿ ಸುಗಮವಾಗಿದೆ.

**ಚಿಕ್ಕಬಳ್ಳಾಪುರ ತಾಲೂಕಿನ ತಿಪ್ಪೇನಹಳ್ಳಿ ಗ್ರಾಮದಲ್ಲಿ ಬುಧವಾರ ಜಿಲ್ಲಾಡಳಿತ, ತಾಲೂಕು ಆಡಳಿತ (ಕಂದಾಯ ಇಲಾಖೆ) ಚಿಕ್ಕಬಳ್ಳಾಪುರ ಇವರ ವತಿಯಿಂದ ಆಯೋಜಿಸಿದ್ದ ಇ-ಪೌತಿ ಖಾತಾ ಆಂದೋಲನ ಕಾರ್ಯಕ್ರಮಕ್ಕೆ ಜಿಲ್ಲಾಧಿಕಾರಿ ಪಿ.ಎನ್ ರವೀಂದ್ರ ಅವರು ಚಾಲನೆ ನೀಡಿದರು. ಅಧಿಕಾರಿಗಳು, ಸಿಬ್ಬಂದಿ, ಸಾರ್ವಜನಿಕರು ಉಪಸ್ಥಿತರಿದ್ದರು.**

**IN THE COURT OF THE HON'BLE CIVIL JUDGE AND JMFC AT BAGEPALLI**
**Crl.MIS.No.1226/2025**
**Petitioners:** 1. Sri. Venkataravana, S/o. Late.Chinna Venkatarayappa, Aged about 70 years, 2. Sri. Narayana Swamy, S/o. Late. Chinna Venkatarayappa, Aged about 50 years, 3. Smt. Tulashi, D/o. Late.Lakshmanna, Aged about 32 years, 4. Smt. Manjula, D/o.Late.Lakshmanna, Aged about 27 years, 5. Smt. Shamala, D/o.Late.Lakshmanna, Aged about 24 years, 6. Sri. Naveen Kumar. V, S/o.Late. Venkataswamy, Aged about 26 years, All are R/at. Bandarlapalli village, Billur Post, Pathapalya hobli, Bagepalli Taluk, Chikkaballapur District.
**VS**
**Respondent:** The Registrar birth and death office of the Tahsildar Bagepalli Taluk, Bagepalli.
**DRAFT PUBLICATION**
The petitioners have filed this petition death certificate of the father of the petitioner by name Late the petitioner No.1 & 2 father and grandfather of the petitioner No.3 to 6 onc Late.Chinna Venkatarayappa S/o.Late. Venkata Swamy, was died in the house of the petitioners on 01-01-2000, at Thurkeshapalli Village Bagepalli taluk, Chikkaballapur dist, the petition is pending. Any person have any right, or interest may appear before this Hon'ble court on 23/12/25 at 11:00 a.m, in person or through pleader to your objections if any. Take notice that in default of your appearance on the date before mentioned in the petition, failing which the matter will be heard and decided ex-parte.
Dated thus 02 day of 12 2025.
**BY ORDER OF THE COURT**
**Civil Jand JMFC, Bagepalli.**
**Kajimulla, Advocate for Petitioner Bagepali**
**Place: Bagepalli**
**Date: 24/11/2025**

**ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್**
ನೋಂದಾಯಿತ ಕಚೇರಿ: ಗ್ರೇಪ್ ಗಾರ್ಡನ್, ನಂ. 27, 3ನೇ ಎ ಕ್ರಾಸ್, 18ನೇ ಮೈನ್ ಕೋರಮಂಗಲ 6ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560095
ಶಾಖಾ ಕಚೇರಿ: 4ನಂ.6-4-63, ನೆಲಮಹಡಿ, ದ್ವಾರಕಾ ಆರ್ಕೇಡ್ ಎ ವಿ ಲೇಔಟ್, ಗಂಗಮ್ಮ ಗುಡಿ ರಸ್ತೆ, ಹೊಸಕೋಟೆ, ಬೆಂಗಳೂರು-562114.
**ಇ-ಹರಾಜು ಮಾರಾಟ ಸೂಚನೆ**
ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆ್ಯಕ್ಟ್, 2002ನ್ನು ಓದಿಕೊಂಡಂತೆ ನಿಯಮ 8(6) ಮತ್ತು 9(1) ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ಅನ್ವಯ ಇ-ಹರಾಜು ಮಾರಾಟ ಪ್ರಕಟಣೆ
ಕೆಳಸಹಿದಾರರು ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಅಧಿಕೃತ ಅಧಿಕಾರಿಯಾಗಿದ್ದು, ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಸೆಕ್ಷನ್ 13(4)ರ ಸಫೇಸಿ ಕಾಯಿದೆ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸ್ವಾಧೀನಪಡಿಸಿಕೊಂಡಿರುತ್ತಾರೆ. ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರ(ರು)ರಿಗೆ ತಿಳಿಸುವುದೇನೆಂದರೆ, ಈ ಕೆಳಗೆ ಶಟ್ಟು ಮಾಡಿರುವ ಸ್ಥಿರಾಸ್ತಿಗಳನ್ನು ಬ್ಯಾಂಕ್ ಗೆ ಬರಬೇಕಾಗಿರುವ ಬಾಕಿ ಹಣದ ವಮೂಲಾತಿಗಾಗಿ "ಎಲ್ಲಿ ಹೇಗಿದೆಯೋ ಹಾಗೆ", "ಏನಿದೆಯೋ ಹಾಗೆ" ಮತ್ತು "ಏನಿದೆಯೋ ಹಾಗೆ" ಆಧಾರದ ಮೇಲೆ ಈ ಕೆಳಗೆ ಹೆಸರಿಸಿರುವ ದಿನಾಂಕ ಮತ್ತು ಸಮಯದಂದು ಮಾರಾಟ ಮಾಡಲಿರುವರು.

| ಸಾಲದ ಖಾತಾ ಸಂ./ ಸಾಲಗಾರರ ಸಹ-ಸಾಲಗಾರರ/ ಜಾಮೀನುದಾರರ ಹೆಸರು | (1) 13(2) ನೋಟೀಸ್ ದಿನಾಂಕ & ತಗಾದೆ ಮೊತ್ತ (2) ಸ್ವಾಧೀನತೆ ದಿನಾಂಕ | | ಮೀಸಲು ಬೆಲೆ (ಐಎನ್‌ಆರ್) | ಅರ್ನೆಸ್ಟ್ ಠೇವಣಿ ಹಣ (ಇಎಂಡಿ) (ಐಎನ್‌ಆರ್) |
|---|---|---|---|---|
| 1633210080000049 1. ಶ್ರೀ ರಾಜರೆಡ್ಡಿ ಎನ್ 2. ಶ್ರೀಮತಿ ಮಮತ ಸಿ | (1) 16.02.2022 ರಂತೆ ರೂ.9,14,785/-(ಒಂಭತ್ತು ಲಕ್ಷ ಹದಿನಾಲ್ಕು ಸಾವಿರದ ಏಳುನೂರ ಎಂಭತ್ತೈದು ರೂಪಾಯಿ ಮಾತ್ರ) 15.02.2022 ರಂತೆ (2) ಸಾಂಕೇತಿಕ ಸ್ವಾಧೀನತೆ : 07.10.2022 & ಭೌತಿಕ ಸ್ವಾಧೀನತೆ : 26.05.2025 | ರೂ.19,71,900.62 (ಹತ್ತೊಂಭತ್ತು ಲಕ್ಷ ಎಪ್ಪತ್ತೊಂದು ಸಾವಿರದ ಒಂಭೈನೂರು ರೂಪಾಯಿ ಮತ್ತು ಪೈಸೆ ಅರುವತ್ತೆರಡು ಮಾತ್ರ) 28.11.2025 ರಂತೆ | ₹ 28,07,000/- (ಇಪ್ಪತ್ತೆಂಟು ಲಕ್ಷ ಏಳು ಸಾವಿರ ರೂಪಾಯಿ ಮಾತ್ರ) | ₹ 2,80,700/- (ಎರಡು ಲಕ್ಷ ಎಂಭತ್ತು ಸಾವಿರದ ಏಳುನೂರು ರೂಪಾಯಿ ಮಾತ್ರ) |

ಆಸ್ತಿಯ ಹೆಡ್ಡೂಲ್ : ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಆಸ್ತಿ ನಂ. 66/1, ಇ-ಖಾತಾ ನಂ. 151901101701000068, ವಿಸ್ತೀರ್ಣ 15.8496ಥ11.2776 ಮೀಟರ್ ಚೊತೆಗೆ ಮನೆ ಇದ್ದು ನೀಲತೂರು ಗ್ರಾಮ, ರೋನೂರು ಹೋಬಳಿ, ಶ್ರೀನಿವಾಸಪುರ ತಾಲೂಕು, ಕೋಲಾರ ಜಿಲ್ಲೆ ಇದ್ದು ಪ್ರಸ್ತುತ ಅರಿಕುಂಟೆ ಗ್ರಾಮಪಂಚಾಯತ್ ವ್ಯಾಪ್ತಿಗೆ ಒಳಪಟ್ಟಿದೆ. ಪೂರ್ವದಿಂದ ಪಶ್ಚಿಮಕ್ಕೆ : 52 ಅಡಿ, ಉತ್ತರದಿಂದ ದಕ್ಷಿಣಕ್ಕೆ ; 37 ಅಡಿ, ಒಟ್ಟು ವಿಸ್ತೀರ್ಣ 1924 ಅಡಿಗಳು ಮತುತ ಚಕ್ಕುಬಂದಿ: ಪೂರ್ವಕೆಕ : 3 ಅಡಿ ರಸ್ತೆ, ಪಶ್ಚಿಮಕ್ಕೆ ; ರಾಮರೆಡ್ಡಿರವರ ಆಸ್ತಿ, ಉತ್ತರ : ರಸ್ತೆ, ದಕ್ಷಿಣ : ಸಂದು ದಾರಿ, ಒಟ್ಟಾಗಿ ಭೂಮಿ ಮತ್ತು ಕಟ್ಟಡ ಹಾಗೂ ಎಲ್ಲಾ ಅಪ್ರುಟೆಂಟ್‌ಗಳು ಇದರಲ್ಲಿರುವುದು ಸೇರಿದಂತೆ.

ಪರಭಾರೆ : ಆಸ್ತಿಯನ್ನು ಬದಲಿಯಾಗಿ ಅಡಮಾನ ಮಾಡಿರುವುದು. 1. ಆಪ್ಟಸ್ ವ್ಯಾಲ್ಯೂ ಹೌಸಿಂಗ್ ಫೈನಾನ್ಸ್ ಇಂಡಿಯ ಲಿಮಿಟೆಡ್, 2. ಯುಗ್ರೋ ಕ್ಯಾಪಿಟಲ್ ಲಿಮಿಟೆಡ್. 3. ಚೋಳಮಂಡಲಮ್ ಇನ್ವೆಸ್ಟ್‌ಮೆಂಟ್ ಫೈನಾನ್ಸ್ ಕಂಪನಿ, 4. ಆಸ್ತಿಯ ಮೇಲೆ : ಬಜಾಜ್ ಫೈನಾನ್ಸ್ ಲಿಮಿಟೆಡ್. ಆದಾಗ್ಯೂ ಆಸ್ತಿಯ ಮೇಲೆ ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಮೊದಲ ಮತ್ತು ಸೂಕ್ತವಾದ ಅಧಿಕಾರವನ್ನು ಹೊಂದಿದೆ.

**ಇ-ಹರಾಜಿನ ದಿನಾಂಕ ಮತ್ತು ಸಮಯ: 31.12.2025, ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.00 ಗಂಟೆಯವರೆಗೆ**

| ಬಿಡ್ ಸಲ್ಲಿಸಲು ಕೊನೆಯ ದಿನಾಂಕ | ಆಸ್ತಿ ಪರಿವೀಕ್ಷಣೆ ದಿನಾಂಕ ಮತ್ತು ಸಮಯ |
|---|---|
| 30.12.2025ರಂದು ಬೆಳಿಗ್ಗೆ 10.00 ರಿಂದ ಸಂಜೆ 5.00 ರ ನಡುವೆ | 29.12.2025 ರಂದು ಬೆಳಿಗ್ಗೆ 10.00 ರಿಂದ ಸಂಜೆ 5.00 ರ ನಡುವೆ |

ಹೆಚ್ಚಿನ ಮಾಹಿತಿಗಾಗಿ ಬ್ಯಾಂಕ್‌ನ ಅಧಿಕೃತ ಅಧಿಕಾರಿಯವರನ್ನು ಸಂಪರ್ಕಿಸಿ:
ಶ್ರೀ ರಾಜು ವಿ -88929 14019 / ಶ್ರೀ ಟಿಜೊ ಎಮ್ ಸಾಜನ್ - 78451 92961

ಹರಾಜನ್ನು "ಎಲ್ಲಿ ಹೇಗಿದೆಯೋ ಹಾಗೆ" ಮತ್ತು "ಏನಿದೆಯೋ ಹಾಗೆ" ನಡೆಸಲಾಗುವುದು
ಹರಾಜನ್ನು ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ಅನುಮೋದಿತ ಇ-ಹರಾಜು ಸೇವಾ ಪೂರೈಕೆದಾರ - ಮೆ॥ ಸಿ ಇಂಡಿಯ ಪ್ರೈ. ಲಿ., ಮೂಲಕ ನಡೆಸಲಾಗುವುದು. ಸಂಪರ್ಕ ವ್ಯಕ್ತಿ: ಶ್ರೀ ಪ್ರಭಾಕರನ್ (ಮೊ. ಸಂ. 74182 81709). ಅಹೇಕ್ಷಿತ ಬಿಡ್ಡುದಾರರು https://www.bankeauctions.com ಅಥವಾ https://www.ujjivanfb.in/e-auctions ಗೆ ಭೇಟಿ ನೀಡಿ ಆಸ್ತಿಗಳ ಹೆಚ್ಚಿನ ವಿವರಗಳನ್ನು ತಿಳಿದುಕೊಂಡು, ಬಿಡ್‌ನಲ್ಲಿ ಭಾಗವಹಿಸಬಹುದು ಹಾಗೂ ಅವರು ತಮ್ಮ ಹೆಸರನ್ನು https://www.bankeauctions.com ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡು ಉಚಿತವಾಗಿ ತಮ್ಮ ಯೂಸರ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಪಡೆದುಕೊಳ್ಳಬಹುದು. ಅಹೇಕ್ಷಿತ ಬಿಡ್ಡುದಾರರು ಇಹರಾಜು ಬಗ್ಗೆ ಆನ್‌ಲೈನ್ ತರಬೇತಿಯನ್ನು ಸೇವಾ ಪೂರೈಕೆದಾರರಾದ ಮೆ॥ ಸಿ ಇಂಡಿಯ ಪ್ರೈ.ಲಿ., ಸಹಾಯವಾಣಿ ಸಂ.7291918824, 25, 26, ಸಪೋರ್ಟ್ ಇ-ಮೇಲ್ ಐಡಿ : support@bankeauctions.com ಹರಾಜು ಪೋರ್ಟಲ್ : https://www.bankeauctions.com,
ಮಾರಾಟದ ವಿವರವಾದ ನಿಯಮ ಮತ್ತು ನಿಬಂಧನೆಗಳಿಗೆ ಬ್ಯಾಂಕ್ / ಪೂರಕ ಭದ್ರತಾದಾರರ ವೆಬ್‌ಸೈಟ್‌ನಲ್ಲಿ ನೀಡಲಾದ ಲಿಂಕ್‌ನ್ನು ಆಧಾರ ಮಾಡಿಕೊಳ್ಳಿ
https://www.ujjivansfb.in/e-auctions / https://www.bankeauctions.com.
ದಿನಾಂಕ: 11.12.2025, ಸ್ಥಳ: ಬೆಂಗಳೂರು
ಸಹಿ/-
ಅಧಿಕೃತ ಅಧಿಕಾರಿ, ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್

# ಕಾಲುದಾರಿ ಒತ್ತುವರಿ ತೆರವಿಗೆ ಗ್ರಾಮಸ್ಥರ ಆಗ್ರಹ

**ಉದಯಕಾಲ ನ್ಯೂಸ್, ಬಂಗಾರಪೇಟೆ:** ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ಕಾಲುದಾರಿಯ ಒತ್ತುವರಿ ವಿಷಯ ಮತ್ತೆ ಚರ್ಚೆಗೆ ಗ್ರಾಸವಾಗಿದೆ.

ತಾಲೂಕಿನ ಮಾಗೊಂದಿ ಗ್ರಾಪಂ ವ್ಯಾಪ್ತಿಯ ಅತ್ತಿಗಿರಿ ಗ್ರಾಮದ ಸರ್ವೇ ನಂ.62ರಲ್ಲಿ ಹಾದು ಹೋಗುವ ಕಾಲುದಾರಿ ಅತ್ತಿಗಿರಿ ಮತ್ತು ಪರವನಹಳ್ಳಿ ನಡುವಿನ ಪ್ರಮುಖ ಸಂಪರ್ಕ ಮಾರ್ಗವಾಗಿದೆ. ನೂರಾರು ರೈತರು ತಮ್ಮ ಭೂಮಿ ಮತ್ತು ಕೃಷಿ ಚಟುವಟಿಕೆಗಳಿಗೆ ಇದು ಒಂದೇ ಮಾರ್ಗವಾಗಿದ್ದು, ಕಳೆದ ಹಲವು ವರ್ಷಗಳಿಂದ ಕೆಲವು ಪ್ರಭಾವಿಗಳು ಈ ರಸ್ತೆಯ ಭಾಗವನ್ನು ವೈಯಕ್ತಿಕವಾಗಿ ಬಳಸಿಕೊಂಡು, ಸಾಮಾನ್ಯ ಜನರಿಗೆ ಸಂಚಾರಕ್ಕೆ ಅಡ್ಡಿಯುಂಟು ಮಾಡುತ್ತಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸಿದರು.

ಗ್ರಾಮಸ್ಥರ ಮನವಿ ಹಿನ್ನೆಲೆ ಜಿಲ್ಲಾಧಿಕಾರಿಗಳು ವಿಷಯವನ್ನು ಪರಿಗಣಿಸಿ, ಇತ್ತೀಚೆಗೆ ಈ ಪ್ರದೇಶದಲ್ಲಿ ಇಟಿಎಸ್ ಯಂತ್ರದ ಮೂಲಕ ಸರ್ವೇ ಕಾರ್ಯ ನಡೆಸಲು ಸೂಚನೆ ನೀಡಿದ್ದರು. ಭೂ ಮಾಪಕರಿಂದ ಸರ್ವೇ ಪೂರ್ಣಗೊಂಡು, ರಸ್ತೆ ಪ್ರದೇಶದ ಮೇಲೆ ಅಕ್ರಮ ಒತ್ತುವರಿ ನಡೆದಿರುವುದು ಸ್ಪಷ್ಟವಾಗಿದೆಯೆಂದು ನಕಾಶೆಯಲ್ಲಿ ತೋರಿಸಲಾಗಿದೆ. ಆ ನಕ್ಷೆಯ ಆಧಾರದ ಮೇಲೆ ಜಿಲ್ಲಾಧಿಕಾರಿಗಳಿಂದ ಬಂಗಾರಪೇಟೆ ತಹಶೀಲ್ದಾರರಿಗೆ ಅಧಿಕೃತ ಆದೇಶ ಹೊರಡಿಸಿ, ಒತ್ತುವರಿ ತೆರವು ಕಾರ್ಯ ಕೈಗೊಳ್ಳುವಂತೆ ಸೂಚನೆ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಕಳೆದ ನ.29ರಂದು ತಹಶೀಲ್ದಾರರು, ಗ್ರಾಮ ಪಂಚಾಯಿತಿ ಅಧಿಕಾರಿಗಳು ಹಾಗೂ ಪೊಲೀಸರ ಬಂದೋಬಸ್ತ್‌ನೊಂದಿಗೆ ಸ್ಥಳ ಪರಿಶೀಲನೆ ನಡೆಸಿ, ನಕ್ಷೆಯಲ್ಲಿ ಗುರುತಿಸಲ್ಪಟ್ಟ ಪ್ರದೇಶದಲ್ಲಿ ತೆರವು ಕಾರ್ಯ ಕೈಗೊಳ್ಳಬೇಕಾಗಿತ್ತು. ಆದರೆ ಸ್ಥಳದಲ್ಲಿ ಕೆಲವರಿಂದ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಅಧಿಕಾರಿಗಳು ತೆರವು ಕಾರ್ಯವನ್ನು ಮುಂದೂಡಿದರು. ಇದರ ಪರಿಣಾಮವಾಗಿ ಗ್ರಾಮಸ್ಥರ ಆಕ್ರೋಶಕ್ಕೆ ಕಾರಣವಾಗಿದೆ.

ಜಿಲ್ಲಾಧಿಕಾರಿಗಳ ಆದೇಶ ಇದ್ದರೂ ಸ್ಥಳೀಯ ಮಟ್ಟದಲ್ಲಿ ಅಧಿಕಾರಿಗಳು ಕ್ರಮ ಕೈಗೊಳ್ಳದಿರುವುದು ನಿಜಕ್ಕೂ ವಿಷಾದನೀಯ. ಈ ಘಟನೆ ಕುರಿತು ಅಧಿಕಾರಿಗಳಿಂದ ಯಾವುದೇ ಅಧಿಕೃತ ಸ್ಪಷ್ಟೀಕರಣ ಇನ್ನೂ ಸಿಕ್ಕಿಲ್ಲ. ತಹಶೀಲ್ದಾರ್ ಕಚೇರಿಯ ಮ